(84)

# ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ: ರಾಜ್ಯ ಸಿವಿಲ್ ಸೇವೆಯ ಅಧಿಕಾರಿ ಮತ್ತು ನೌಕರರ ಗೃಹ ನಿರ್ಮಾಣ ಮುಂಗಡ ಮಂಜೂರು ಮಾಡುವ ಬಗ್ಗೆ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸುವ ಬಗ್ಗೆ.**

**ಓದಲಾಗಿದೆ: ಸರ್ಕಾರಿ ಆದೇಶ ಸಂಖ್ಯೆ:ಆಇ 02 ಮಕಮು 2012 ದಿ:20.01.2014.**

* * *

ಪ್ರಸ್ತಾವನೆ:

ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಯ 'ಎ' ಗುಂಪಿನ ಅಧಿಕಾರಿಗಳಿಗೆ ಅವರು ಪಡೆಯುತ್ತಿರುವ 70 ತಿಂಗಳ ವೇತನಕ್ಕೆ ಅನುಗುಣವಾಗಿ ಹಾಗೂ ಮರುಪಾವತಿ ಸಾಮರ್ಥ್ಯದನುಸಾರ ಗೃಹ ನಿರ್ಮಾಣ/ಖರೀದಿ ಮುಂಗಡ ಮಿತಿಯನ್ನು ರೂ.25.00 ಲಕ್ಷಗಳಿಗೆ ಹೆಚ್ಚಿಸಲು ಮತ್ತು ರಾಜ್ಯ ಸಿವಿಲ್ ಸೇವೆಯ ಇತರೆ ಅಧಿಕಾರಿಗಳು ಮತ್ತು ನೌಕರರಿಗೆ ಗೃಹ ನಿರ್ಮಾಣ/ಖರೀದಿ ಮುಂಗಡ ಮಿತಿಯನ್ನು ರೂ.15.00 ಲಕ್ಷಕ್ಕೆ ಹೆಚ್ಚಿಸಲು ಆದೇಶಿಸಲಾಗಿದೆ ಹಾಗೂ ಈ ಆದೇಶದಿಂದ ಕರ್ನಾಟಕ ವೃಂದಕ್ಕೆ ಸೇರಿ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಖಿಲ ಭಾರತ ಸೇವೆಗಳಿಗೆ ಸೇರಿದ ಅಧಿಕಾರಿಗಳು ಅವರ 70 ತಿಂಗಳ ಮೂಲ ವೇತನ ಮತ್ತು ವೇತನ ಶ್ರೇಣಿಯ ಗ್ರೇಡ್ ವೇತನವು ಸೇರಿದಂತೆ ಅವರ ಮರುಪಾವತಿ ಸಾಮರ್ಥ್ಯಕ್ಕನುಗುಣವಾಗಿ ರಾಜ್ಯ ಸಿವಿಲ್ ಸೇವೆಯ 'ಎ' ಗುಂಪಿನ ಅಧಿಕಾರಿಗಳಂತೆ ಗರಿಷ್ಠ ರೂ.25.00 ಲಕ್ಷ ಗೃಹ ನಿರ್ಮಾಣ ಮುಂಗಡವನ್ನು ಪಡೆಯಲು ಅರ್ಹರಾಗಿರುತ್ತಾರೆ.

ರಾಜ್ಯ ಸಿವಿಲ್ ಸೇವೆಯ ಅಧಿಕಾರಿಗಳು ಮತ್ತು ನೌಕರರಿಗೆ ಗೃಹ ನಿರ್ಮಾಣ/ಖರೀದಿ ಮುಂಗಡ ಮಂಜೂರು ಮಾಡಲು ಸಾಲ ನೀಡುವ ಹಣಕಾಸು ಸಂಸ್ಥೆಯನ್ನು ಆಯ್ಕೆ ಮಾಡುವ ವಿಷಯವನ್ನು ಪರಿಶೀಲಿಸಿ, ಸಮಗ್ರ ಸಾಧಕ-ಬಾಧಕಗಳನ್ನು ವಿಶ್ಲೇಷಿಸಿದ ನಂತರ ಸರ್ಕಾರಿ ನೌಕರರ ಹಿತದೃಷ್ಟಿಯಿಂದ ಆಯವ್ಯಯದ ಮೂಲಕ ಅನುದಾನವನ್ನು ಒದಗಿಸುವುದು ಸೂಕ್ತವೆಂದು ನಿರ್ಣಯಿಸಿ, ಅದರಂತೆ ಈ ಮುಂದಿನಂತೆ ಆದೇಶಿಸಿದೆ.

***ಸರ್ಕಾರಿ ಆದೇಶ ಸಂಖ್ಯೆ: ಆಇ 02 ಮಕಮು 2014, ಬೆಂಗಳೂರು ದಿ:05.05.2015***

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರಾಜ್ಯ ಸಿವಿಲ್ ಸೇವೆಯ 'ಎ' ಗುಂಪಿನ ಅಧಿಕಾರಿಗಳಿಗೆ ಅವರು ಪಡೆಯುತ್ತಿರುವ 70 ತಿಂಗಳ ವೇತನಕ್ಕೆ ಅನುಗುಣವಾಗಿ ಹಾಗೂ ಮರುಪಾವತಿ ಸಾಮರ್ಥ್ಯದನುಸಾರ ಗೃಹ ನಿರ್ಮಾಣ/ಖರೀದಿ ಮುಂಗಡ ಗರಿಷ್ಠ ಮಿತಿಯನ್ನು ರೂ.25.00 ಲಕ್ಷಗಳಿಗೆ ಮತ್ತು ರಾಜ್ಯ ಸಿವಿಲ್ ಸೇವೆಯ ಇತರೆ ಅಧಿಕಾರಿಗಳು ಮತ್ತು ನೌಕರರಿಗೆ ಗೃಹ ನಿರ್ಮಾಣ/ಖರೀದಿ ಮುಂಗಡ ಗರಿಷ್ಠ ಮಿತಿಯನ್ನು ರೂ.15.00 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಕರ್ನಾಟಕ ವೃಂದಕ್ಕೆ ಸೇರಿ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಖಿಲ ಭಾರತ ಸೇವೆಗಳಿಗೆ ಸೇರಿದ ಅಧಿಕಾರಿಗಳಿಗೂ ಈ ಸೌಲಭ್ಯವನ್ನು ಅನ್ವಯಿಸಿದ್ದು, ಅವರ 70 ತಿಂಗಳ ಮೂಲ ವೇತನ ಮತ್ತು ವೇತನ ಶ್ರೇಣಿಯ ಗ್ರೇಡ್ ವೇತನವು ಸೇರಿದಂತೆ ಅವರ ಮರುಪಾವತಿ ಸಾಮರ್ಥ್ಯಕ್ಕನುಗುಣವಾಗಿ ರಾಜ್ಯ ಸಿವಿಲ್ ಸೇವೆಯ 'ಎ' ಗುಂಪಿನ ಅಧಿಕಾರಿಗಳಂತೆ ಗರಿಷ್ಠ ರೂ.25.00 ಲಕ್ಷ ಗೃಹ ನಿರ್ಮಾಣ ಮುಂಗಡವನ್ನು ಪಡೆಯಲು ಅರ್ಹರಾಗಿರುತ್ತಾರೆ.

...2/-

ರಾಜ್ಯ ಸಿವಿಲ್ ಸೇವೆಯ ಅಧಿಕಾರಿಗಳು ಮತ್ತು ನೌಕರರಿಗೆ ಗೃಹ ನಿರ್ಮಾಣ/ಖರೀದಿ ಮುಂಗಡ ಮಂಜೂರು ಮಾಡಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಲಾಗಿದೆ.

1. ಗೃಹ ನಿರ್ಮಾಣ/ಖರೀದಿ ಮುಂಗಡ ಮಂಜೂರು ಮಾಡುವ ಮುನ್ನ ಅರ್ಜಿದಾರರ ನಿವ್ವಳ ಸಂಬಳ ಎಲ್ಲಾ ಕಟಾವುಗಳ ನಂತರ, ಗೃಹ ನಿರ್ಮಾಣ/ಖರೀದಿ ಮುಂಗಡದ ಪ್ರಸ್ತಾಪಿತ ಕಟಾವು ಸೇರಿ ಒಟ್ಟು ಸಂಬಳದ ಅರ್ಧದಷ್ಟು ಕಡಿಮೆ ಬೀಳದಂತೆ ಖಚಿತಪಡಿಸಿಕೊಳ್ಳುವುದು.

2. ಪ್ರಸ್ತುತ ವಾಸಿಸುತ್ತಿರುವ ಗೃಹದ ವಿಸ್ತರಣೆ/ನವೀಕರಣಕ್ಕೆ ಸಂಬಂಧಿಸಿದಂತೆ, ಗರಿಷ್ಟ ಮಿತಿಯನ್ನು ಗೃಹ ಮುಂಗಡದ ಶೇ.50 ರಷ್ಟು ಅಥವಾ ತಗಲುವ ಅಂದಾಜು ವೆಚ್ಚ ಇವುಗಳ ಪೈಕಿ ಯಾವುದು ಕಡಿಮೆಯೋ ಅದನ್ನು ಮಂಜೂರು ಮಾಡತಕ್ಕದ್ದು.

3. ಗೃಹ ನಿರ್ಮಾಣ/ಖರೀದಿ ಮುಂಗಡದ ಮೇಲಿನ ಬಡ್ಡಿದರವು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ಮಂಜೂರಾದ ಮುಂಗಡದ ಮೊತ್ತ | ಬಡ್ಡಿದರ (ವಾರ್ಷಿಕ) |
|---|---|---|
| 1. | ರೂ.50,000/- ದ ವರೆಗೆ | 5% |
| 2. | ರೂ.1,50,000/- ದ ವರೆಗೆ | 6.5% |
| 3. | ರೂ.5,00,000/- ದ ವರೆಗೆ | 8.5% |
| 4. | ರೂ.5,00,000/-ಕ್ಕಿಂತ ಹೆಚ್ಚು ಮತ್ತು ರೂ.25,00,000/- ದ ವರೆಗೆ. | 9.5% |

4. ಈ ಮುಂಗಡಗಳಿಗೆ ಮೇಲಿನ ಷರತ್ತು ನಿಬಂಧನೆಗಳೇ ಅಲ್ಲದೇ, ಕರ್ನಾಟಕ ಆರ್ಥಿಕ ಸಂಹಿತೆ, 1958ರ ಮುಂಗಡ ನಿಯಮಾವಳಿಗಳೂ ಸಹ ಅನ್ವಯವಾಗುತ್ತವೆ.
5. ಕರ್ನಾಟಕ ಆರ್ಥಿಕ ಸಂಹಿತೆ, 1958ಕ್ಕೆ ಅಗತ್ಯ ತಿದ್ದುಪಡಿಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.
6. ಈ ವಿಷಯದಲ್ಲಿ ಸರ್ಕಾರವು ಆಗಿಂದಾಗ್ಗೆ ಹೊರಡಿಸುವ ಸೂಚನೆಗಳು/ತಿದ್ದುಪಡಿಗಳು ಮುಂದುವರೆದು ಅನ್ವಯವಾಗುತ್ತವೆ.

ಈ ವೆಚ್ಚವನ್ನು ಲೆಕ್ಕಶೀರ್ಷಿಕೆ "7610-00-201-0-03-393 ಇತರರಿಗೆ ಗೃಹ ನಿರ್ಮಾಣ ಮುಂಗಡಗಳು" ರಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್.ಲಕ್ಷ್ಮಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ಆಡಳಿತ & ಮುಂಗಡ)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರ & ತನಿಖೆ), ಕರ್ನಾಟಕ, ಬೆಂಗಳೂರು,

...3/-

2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು/ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು,
3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು,
5. ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತಿಯ ಎಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು,
6. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
7. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು,
8. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕಂದಾಯಭವನ, ಬೆಂಗಳೂರು,
9. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು,
10. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ/ ವಿಧಾನ ಪರಿಷತ್ತು, ವಿಧಾನಸೌಧ, ಬೆಂಗಳೂರು,
11. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು,
12. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ)- ದಿನಾಂಕ:10.01.2014ರ ಸಭೆಯ ಕಾರ್ಯಸೂಚಿ ಕ್ರ.ಸಂ. (9)ರಲ್ಲಿನ ನಿರ್ಣಯದಂತೆ,
13. ಸರ್ಕಾರದ ಜಂಟಿ ಕಾರ್ಯದರ್ಶಿಗಳು (ಎಫ್ಆರ್ ಮತ್ತು ಬಿಸಿಸಿ), ಆರ್ಥಿಕ ಇಲಾಖೆ – ಕರ್ನಾಟಕ ಆರ್ಥಿಕ ಸಂಹಿತೆಗೆ ಸೂಕ್ತ ತಿದ್ದುಪಡಿ ಹೊರಡಿಸಲು ಕ್ರಮ ಕೈಗೊಳ್ಳಲು,
14. ಸರ್ಕಾರದ ಜಂಟಿ ಕಾರ್ಯದರ್ಶಿ (ಸೇವೆಗಳು-2), ಆರ್ಥಿಕ ಇಲಾಖೆ,
15. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು,
16. ಆರ್ಥಿಕ ಇಲಾಖೆಯ ಗಣಕ ಕೋಶ-ಆರ್ಥಿಕ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು,
17. ಕಚೇರಿ ಪ್ರತಿ/ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.